

ಎಡದಿಂದ ಬಲಕ್ಕೆ :

1. ತನಗೆ ಬೇಕೆನಿಸಿದಂತೆ ಆತ ನಿರ್ಮಿಸಿಕೊಂಡ ಮನೆ 4
3. ಎಷ್ಟು ವಿಚಿತ್ರ ನೋಡಿದಿರಾ, ಈ ಸುದ್ದಿ, ಆಲೋಚನೆ? 3
4. ಕಿಂಚಿತ್ತೂ ಸಂಶಯ ಬೇಡ, ಅದು ಖಂಡಿತ 3
6. ಭಾರೀ ಪ್ರಚಾರ ಅಷ್ಟೆ, ಇನ್ನೆಲ್ಲ ನೀತಿ ನಿಯಮ ಇಲ್ಲದ ನಡವಳಿಕೆ 4
7. ಪ್ರಸಾದ ವಿನಿಯೋಗಕ್ಕೆ ಕಾರಣ ಗಣೇಶನೇ ತಾನೇ? 4
9. ದುರುಪಯೋಗ ಮಾಡಿದ್ದೆಲ್ಲ ಇತರರ ದುಡ್ಡು, ಐಶ್ವರ್ಯ 4
11. ದುರಾತ್ಮನಷ್ಟೇ ಅಲ್ಲ, ಅತ್ಯಂತ ಕೀಳು ಮನುಷ್ಯ 4
13. ಮಕರಂದ ಹೀರಲು ಬಂದಿದೆ ನೋಡಿ, ದುಂಬಿ? 4
15. ಬಡ್ಡಿ ಸುರಿದು ಹಣ ತಂದವನ ಹಟಮಾರಿತನ ಹೇಗಿದೆ? 4
17. ಕತ್ತಿಯಿಂದ ರಕ್ಷಿಸುವ ಶಸ್ತ್ರ ಹಿಂದುಮುಂದು 3
18. ಕೂಸನ್ನು ಮಲಗಿಸುವ ವೇಳೆಗೆ ಮುಂಜಾನೆ ಬಂದಿತ್ತು 3
19. ರಚನೆಯನ್ನು ಪೂರ್ಣ ತೋರಿಸುವಂತಹ ನಕ್ಷೆಯನ್ನು ತಯಾರಿಸು 4

ಮೇಲಿಂದ ಕೆಳಕ್ಕೆ:

1. ಬೇರೇನೂ ಅಲ್ಲ, ಆಗಸದಲ್ಲಿ ಕಿಂಚಿತ್ತೂ ಮೋಡವೂ ಇಲ್ಲ 3
2. ನಾಲ್ಕೂ ಜನರ ಬೆರಳಿನಲ್ಲಿ ಇದೆಂಥ ಉಗುರು? 3
3. ವಿದ್ಯೆಯನ್ನು ಕಲಿಸಿದವರು ಹೇಳಿದಂತೆ ಕೇಳುವವ ಈತ 3
5. ತಾಪತ್ರಯಕ್ಕೆ ಕಾರಣ ಎಲ್ಲ ವಸ್ತುಗಳಿಗೂ ಅಭಾವ, ಕೊರತೆ 3
7. ಲಾಭಾಂಶವನ್ನು ವಿತರಿಸುವಲ್ಲಿ ಏಕಿಷ್ಟು ತಡ, ನಿಧಾನ? 4
8. ಕೋಷ್ಟಕಗಳನ್ನು ಮನನ ಮಾಡುವ ಈ ರೀತಿ ಸುಲಭದ್ದಲ್ಲ 4
9. ಧಾರ್ಮಿಕ ಪರಂಪರೆಯಿಂದ ಬಂದಿರುವ ನಂಬಿಕೆ ವೈಕುಂಠ 4
10. ಮೂಷಿಕಗಳನ್ನು ತೊಲಗಿಸಿದವರ ಉಪಕಾರಕ್ಕೆ ಭಾರೀ ವಂದನೆ 4
12. ದೇವರಾಣೆಗೂ ಈ ವರೆಗೆ ತಿಳಿದಿರುವುದು ಇದೊಂದೇ ಭೂಮಿ 3
14. ಮುಂದಕ್ಕೆ ಏನೇ ನಡೆಯಲಿ, ಈಗ ಮೇಲಿಂದ ಕೆಳಕ್ಕೆ ಹಾರು 3
15. ಭಾಗ್ಯವಂತರ ಬದುಕೂ ಶಾಶ್ವತವೇನಲ್ಲ, ಬಿಡಿ 3
16. ಆತನ ಸ್ವಭಾವವನ್ನು ಬದಲಿಸುವ ಕಲ್ಪನೆ ದಿಟವಾಯಿತು 3

## 13-6-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಅಪರೂಪ 3. ಅನಿಷ್ಟ 4. ದಡಿಯ 6. ಕಕವಕ 7. ಆಪಾದನೆ 8. ದನಗಾಹಿ 10. ಕಳವಳ 12. ಗಡಿಬಿಡಿ 14. ಅಕಳಂಕ 16. ನಶ್ವರ 17. ಸೂಕರ (=ಹಂದಿ) 18. ಸುರಪತಿ

ಮೇಲಿಂದ ಕೆಳಕ್ಕೆ:

1. ಅಷ್ಟಕ 2. ಪದಕ 3. ಅಸದಳ 5. ಯಜನ 7. ಆಕರ್ಷಕ 9. ಹಿತನುಡಿ 11. ವದನ 13. ಬಡಿವಾರ14. ಅರಸು 15. ಕಸೂತಿ

ಪ್ರಶ್ನಾ ಂಕಣ

# ಟೈಕಲ್ ಅವಶೇಷ: ಏನು ವಿಶೇಷ?

'ಟೈಕಲ್' ಅದು ಸುಪ್ರಸಿದ್ಧ ಪುರಾತನ ನಾಗರಿಕತೆಯೊಂದರ ಮಹಾನಗರ. ಪ್ರಸ್ತುತ ಅವಶೇಷ ರೂಪದಲ್ಲಷ್ಟೇ ಅದರ ಅಸ್ತಿತ್ವ. ದಕ್ಷಿಣ ಅಮೆರಿಕ ಖಂಡದ 'ಗ್ವಾಟೆಮಾಲಾ' ರಾಷ್ಟ್ರದ ದಟ್ಟ ವೃಷ್ಟಿವನದಲ್ಲಿ ಹುದುಗಿದಂತೆ ಉಳಿದಿರುವ ಈ ನಗರ 'ಮಾಯನ್' ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಕ್ರಿಸ್ತಶಕ 200 ರಿಂದ ಕ್ರಿಸ್ತಶಕ 900 ರವರೆಗೆ ಏಳು ಶತಮಾನಗಳ ಕಾಲ ಅತ್ಯುತ್ತಮ ಸ್ಥಿತಿಯಲ್ಲಿದ್ದ ಮಾಯನ್ ನಾಗರಿಕತೆಯ ಪ್ರಮುಖ ನಗರಗಳಲ್ಲೆಲ್ಲ ಟೈಕಲ್ ನಗರದ್ದೇ ಗರಿಷ್ಠ ವಿಸ್ತಾರ; ಗರಿಷ್ಠ ಜನಸಂಖ್ಯೆ; ಗರಿಷ್ಠ ವೈಭವ. ವಂಶ ಪಾರಂಪರ್ಯವಾಗಿ ಮೂವತ್ತೂರು ಅರಸರು ಆಳ್ವಿಕೆ ನಡೆಸಿದ ಸಾಮ್ರಾಜ್ಯ ಅದು.

ಮಾಯನ್ ನಾಗರಿಕತೆಯ ವಿಶಿಷ್ಟ ಸಾಧನೆಗಳು ಹಲವಾರು. ಗಣಿತ, ಖಗೋಳ ವಿಜ್ಞಾನ, ಕಲೆ, ವಾಸ್ತು ಶಾಸ್ತ್ರ, ಕೃಷಿ ಇತ್ಯಾದಿ ಕ್ಷೇತ್ರಗಳಲ್ಲಿ ಮಾಯನ್ನರ ದಾಖಲೆಗಳು ಅದ್ಭುತ, ಅಪೂರ್ವ. ಅವನ್ನೆಲ್ಲ ಬಿಂಬಿಸುವ ಹೇರಳ ನಿರ್ಮಾಣಗಳ ಅವಶೇಷಗಳು ಈಗಲೂ ಟೈಕಲ್‌ನಲ್ಲಿವೆ. ನಿಬಿಡ ಮಳೆಕಾಡುಗಳ ಒಡಲಲ್ಲಿ ಮುಚ್ಚಿಹೋಗಿದ್ದು, ಪುರಾತತ್ವ ವಿಜ್ಞಾನಿಗಳಿಂದ ಉತ್ಖನನಗೊಂಡಿರುವ ಈ ನಗರದಲ್ಲಿ ಪ್ರಸ್ತುತ 3000ಕ್ಕೂ ಹೆಚ್ಚು ನಿರ್ಮಾಣಗಳು ಕಾಣಸಿಗುತ್ತವೆ: ದೇವಾಲಯಗಳು, ಪಿರಮಿಡ್‌ಗಳು, ನರಬಲಿ ಪೀಠಗಳು, ಅರಸು ನಿವಾಸಗಳು, ಕಲ್ಲು ಹಾಸಿನ ವಿಶಾಲ ರಸ್ತೆಗಳು, ನೀರು ಹರಿಸುವ ನಾಲೆಕಾಲುವೆಗಳು,... ಇತ್ಯಾದಿ (ಚಿತ್ರ 1, 2, 3).

ಹದಿನಾರು ಚದರ ಕಿಲೋ ಮೀಟರ್ ವೈಶಾಲ್ಯ ತಲುಪಿ, ಸರ್ವ ವಿಧಗಳಲ್ಲೂ ಸಮೃದ್ಧ ನಗರವಾಗಿದ್ದು ಉತ್ತುಂಗದಲ್ಲಿದ್ದಾಗ ಟೈಕಲ್ ನಗರದ ಜನ ಸಂಖ್ಯೆ ತೊಂಬತ್ತು ಸಾವಿರ ಮುಟ್ಟಿತ್ತು!



ಆದರೂ, ಎಷ್ಟೆಲ್ಲ ಶ್ರೇಷ್ಠತೆ ತಲುಪಿದ್ದರೂ, ಕ್ರಿ.ಶ 900ರ ಸುಮಾರಿಗೆ ಮಾಯನ್ ಸಾಮ್ರಾಜ್ಯವೇ ಟೈಕಲ್ ಕೂಡ ಅವನತಿಯತ್ತ ಹೊರಳಿತ್ತು. ನಿರಂತರ ಸಮರಗಳು, ಮತ್ತೆ ಮತ್ತೆ ಬಂದೆರಗಿದ ಕ್ಷಾಮ, ಅಂಟು ಜಾಡ್ಯಗಳ ದಾವಾನಲ ಇತ್ಯಾದಿ ಕಂಟಕಗಳಿಂದ ಸಾಮಾನ್ಯ ಜನರ ಬದುಕು ದಾರುಣ ಸ್ಥಿತಿ ತಲುಪಿತ್ತು. ಅದೆಲ್ಲದರ ಪರಿಣಾಮವಾಗಿ ಜನರೆಲ್ಲ ಊರು ತೊರೆದು, ತೋಚಿದತ್ತ ವಲಸೆ ಹೊರಟು ಕೆಲ ವರ್ಷಗಳಲ್ಲೇ ಇಡೀ ಮಾಯನ್ ಸಾಮ್ರಾಜ್ಯ ಕುಸಿದು ಬಿದ್ದಿತ್ತು. ಹಾಗೆ ಪಾಳು ಬಿದ್ದ ಟೈಕಲ್ ನಗರವನ್ನು ದಟ್ಟ ಸಸ್ಯ ರಾಶಿ ಮತ್ತೆ ಆಕ್ರಮಿಸಿ ಆವರಿಸಿತ್ತು. ಶತಮಾನಗಳ ಕಾಲ ಹಾಗೆ ನಾಪತ್ತೆಯಾಗಿದ್ದ ಈ ಮಹಾ ನಗರ 18ನೆಯ ಶತಮಾನದ ಮಧ್ಯದ ಸುಮಾರಿಗೆ ಆಕಸ್ಮಿಕವಾಗಿ ಪತ್ತೆಯಾಗಿ ಆಗಿನಿಂದಲೂ ವಿಶ್ವ ವಿಸ್ಮಯದ ನೆಲೆಯಾಗಿದೆ.

ಎಷ್ಟೆಂದರೆ ಇಸವಿ 1979ರಲ್ಲೇ 'ಯುನೆಸ್ಕೋ' ಸಂಸ್ಥೆ ಟೈಕಲ್ ಅವಶೇಷಗಳ ನೆಲೆಯನ್ನು ತನ್ನ 'ವಿಶ್ವ ಪರಂಪರೆಯ ತಾಣಗಳ ಪಟ್ಟಿ'ಗೆ ಸೇರಿಸಿದೆ. ಟೈಕಲ್ ಅವಶೇಷಗಳು ಹರಡಿರುವ ಕಾನನ ಸಹಿತ 570 ಚದರ ಕಿಲೋಮೀಟರ್ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಗ್ವಾಟೆಮಾಲಾ ದೇಶ ಸಂರಕ್ಷಿಸಿದೆ.

■ ಎನ್. ವಾಸುದೇವ್